# ಕಳೆದು ಹೋಗುತ್ತಿದೆಯೇ ಕಳ್ಳುಬಳ್ಳಿ ಸಂಬಂಧ?

ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣುಮಗಳೂ ಸೇರಿದಂತೆ ಎಲ್ಲ ಮಕ್ಕಳಿಗೂ ಸಮಪಾಲು ಎಂಬ ಕಾನೂನು ಇದ್ದರೂ ಬಹುತೇಕ ಕುಟುಂಬಗಳು ಇದನ್ನು ಸೂಕ್ತವಾಗಿ ಪಾಲಿಸುತ್ತಿಲ್ಲ. ಇದಕ್ಕೆ ಕಾರಣಗಳೇನು? ಪರಿಹಾರವೇನು? ಯಾವುದು ಪಿತ್ರಾರ್ಜಿತ ಮತ್ತು ಯಾವುದು ಸ್ವಯಾರ್ಜಿತ? ಹಿಂದೂ ಉತ್ತರಾಧಿಕಾರ ಕಾಯಿದೆ ಪ್ರಕಾರ ಆನುವಂಶಿಕ ಆಸ್ತಿ ವರ್ಗಾವಣೆ ಹೇಗೆ? ಕೌಟುಂಬಿಕ ಸಾಮರಸ್ಯ ಕಾಯ್ದುಕೊಳ್ಳುವ ದಿಸೆಯಲ್ಲಿ, ವ್ಯಾಜ್ಯಕ್ಕೆ ಎಡೆಯಿಲ್ಲದಂತೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆಯುವುದು ಎಷ್ಟು ಮುಖ್ಯ? ಇಂತಹ ಸಂಗತಿಗಳ ಬಗೆಗಿನ ಕಾನೂನು ಆಯಾಮಗಳನ್ನು ನುರಿತ ನ್ಯಾಯವಾದಿಗಳು ಇಲ್ಲಿ ವಿಶ್ಲೇಷಿಸಿದ್ದಾರೆ. ಈ ಮೂಲಕ, ಪಿತ್ರಾರ್ಜಿತ ಆಸ್ತಿ ಪಡೆಯುವಲ್ಲಿ ಜನಸಾಮಾನ್ಯರಲ್ಲಿ ಇರುವ ಗೊಂದಲ ನಿವಾರಣೆಗೆ ‘ಸುಧಾ’ ಕಾಳಜಿ ವಹಿಸಿದೆ.

■ ಉಮಾ ಅನಂತ್

